## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 2946/2022

| | |
|---|---|
| CW | 05 |
| PW | 02 |

ದಿನಾಂಕಃ 19-11-2025 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಚೈತ್ರಾ |
| ತಂದೆ ಹೆಸರು | ಗಂಡ ಶ್ರೀಕಾಂತ |
| ವಯಸ್ಸು | 30 ವರ್ಷ |
| ಉದ್ಯೋಗ | ಡಬ್ಲ್ಯೂ ಪಿಸಿ 540 |
| ವಾಸಸ್ಥಳ | ಕೊಪ್ಪಳ |

## ಮುಖ್ಯ ವಿಚಾರಣೆಃ ಸಸಅ ರವರಿಂದಃ

ನಾನು 2018 ರಿಂದ ಸೆಪ್ಟಂಬರ್ 2025 ರವರೆಗೆ ಪಿರ್ಯಾದಿ ಠಾಣೆಯಲ್ಲಿ ಪಿ.ಸಿ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿಃ 19-07-2022 ರಂದು ಸಂಜೆ 05-00 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-4 ಹಾಗೂ 6 ರವರು ಠಾಣೆಯಲ್ಲಿದ್ದಾಗ ಚಾಸಾ-1 ರವರು ತಮಗೆ ದೂರವಾಣಿ ಮೂಖಾಂತರ ಹಲವರ್ತಿ ಗ್ರಾಮದ ಕುಣಿಕೇರಿ ಬಸ್ ನಿಲ್ದಾಣದ ಹತ್ತಿರ ಒಬ್ಬ ಹೆಣ್ಣುಮಗಳು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದಿದ್ದು, ಬಗ್ಗೆ ಬಾತ್ಮಿ ಬಂದಿದ್ದು ದಾಳಿ ಮಾಡಲು ತನ್ನೊಂದಿಗೆ ಬರುವಂತೆ ನಮಗೆ ಸೂಚಿಸಿದರುತ್ತಾರೆ.

ನಂತರ ಚಾಸಾ-4 ರವರಿಗೆ ಪಂಚರನ್ನು ಬರಮಾಡಿಕೊಂಡು ಬರುವಂತೆ ತಿಳಿಸಿದ್ದು ಅವರು ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಬಂದು ಚಾಸಾ-1 ರವರಿಗೆ ಪರಿಚಿಯಿಸಿ ದಾಳಿಯ ವಿಷಯವನ್ನು ತಿಳಿಸಿರುತ್ತಾರೆ.

ಅಕಾರಣ ನಾನು ಚಾಸಾ -4 ರವರೆಗೆ ದಾಳಿಗೆ ನನ್ನೊಂದಿಗೆ ಬರಲು ಸೂಚಿಸಿದ್ದು, ನನಗೆ ಇಬ್ಬರ ಪಂಚರನ್ನು ಬರಮಾಡಿಕೊಂಡು ಬರುವಂತೆ ಹೇಳಿದ್ದು, ಅದರಂತೆ ನಾನು ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಚಸಾ 1 ರವರ ಮುಂದೆ ಹಾಜರು ಪಡಿಸಿ, ಅಗ ಚಾಸಾ 1 ರವರ ಅವರಿಗೆ ದಾಳಿಗೆ ಹೋಗುವ ವಿಷಯವನ್ನು ತಿಳಿಸಿದ್ದು ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ.

ನಂತರ ಮುಂಜಾನೆ 08.30 ಗಂಟೆಗೆ ಚಾಸಾ 1 ರವರು ನನನ್ನು ಚಾಸಾ 2 ರಿಂದ 4 ರವರನ್ನು ಇಲಾಖೆ ಜೀಪುನಲ್ಲಿ ಠಾಣೆಯಿಂದ ಕರೆದುಕೊಂಡು ಮುಂಜಾನೆ 09.10 ರ ಸುಮಾರಿಗೆ ಗುನ್ನಸ್ಥಳದ ಸಮೀಪ ಸುಮಾರು 100 ಅಡಿ ದೂರದಲ್ಲಿ ಜೀಪನ್ನು ನಿಲ್ಲಿಸಿ ನಾವೆಲ್ಲರೂ ಕಾಲುನಡಿಗೆಯಲ್ಲಿ ಹೋಗಿ ನಿಂತು ನೋಡಲಾಗಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದು ಹಾಗೂ ಖರೀದಿಸಲು ಜನರು ಸೇರಿದ್ದರು. ನಂತರ ಚಾಸಾ 1 ರವರೊಂದಿಗೆ ನಾವುಗಳು ದಾಳಿ ಮಾಡಿದ್ದು, ನಮ್ಮನ್ನು ನೋಡಿ ಖರೀದಿಸಲು ಬಂದ ಜನರು ಓಡಿ ಹೋಗಿದ್ದು, ಅರೋಪಿಯು ಸಿಕ್ಕಿ ಬಿದಿರುತ್ತಾಳೆ.

ಅರೋಪಿಯನ್ನು ವಿಚಾರಿಸಿದಾಗ ಆಕೆಯ ಹೆಸರು ಸುದಾ ಉರಗಡ್ಡಿ ಎಂದು ತಿಳಿಸಿದ್ದು, ಮದ್ಯ ಮಾರಾಟ ಮಾರಾಟ ಮಾಡಲು ಯಾವುದೇ ಪರವಾನಿಗೆಯನ್ನು ಹೊಂದಿರುವುದಿಲ್ಲ. ನಂತರ ಅವರನ್ನು ಪರಿಶೀಲನೆ ಮಾಡಿದಾಗ ಒಂದು ರಟ್ಟಿನ ಬಾಕ್ಸನಲ್ಲಿದ್ದ ಈ ಕೆಳಕಂಡ ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತೇನೆ.

| | |
|---|---|
| 1. | 90 ಎಂ ಎಲ್ ನ ಹೆಚ್ ಸಿ ವಿಸ್ಕಿ 94 ಟೆಟ್ರಾ ಪ್ಯಾಕೇಟ್ ಗಳು. |
| 2. | 180 ಎಂ ಎಲ್ ನ ಓಟಿ ವಿಸ್ಕಿ 05 ಟೆಟ್ರಾ ಪ್ಯಾಕೇಟ್ ಗಳು. |

ಈ ಮೇಲಿನ ಮದ್ಯದ ಪ್ಯಾಕೇಟ್ ಗಳನ್ನು ಅರೋಪಿಯ ಬಳಿಯಿಂದ ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಮುಂಜಾನೆ 09.20 ರಿಂದ 10.20 ರವರೆಗೆ ಪಂಚನಾಮೆಯನ್ನು ಜರುಗಿಸಿ ಗಣಕೀಕೃತಗೋಳಿಸಿ ನಂತರ ಠಾಣೆಗೆ ಬಂದು ಪ್ರಿಂಟ್ ನ್ನು ತೆಗೆದು ಪಂಚರ ಸಹಿ ಪಡೆದಿರುತ್ತೇನೆ. ಪಂಚನಾಮೆಯನ್ನು ಮುಗಿಸಿ ಮುಂಜಾನೆ 11.00 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾ 1 ರವರು ಚಾಸಾ 8 ರವರಿಗೆ ಗಣಕೀಕೃತ ಫಿರ್ಯಾದಿಯನ್ನು ನೀಡಿ, ಪಂಚನಾಮೆ ಮತ್ತು ಮುದ್ದೆಮಾಲುಗಳು ಹಾಗೂ ಅರೋಪಿಯ ಸಮೇತ ಅವರ ವಶಕ್ಕೆ ನೀಡಿರುತ್ತೇನೆ. ನಾನು ಈ ಬಗ್ಗೆ ಹೇಳಿಕೆಯನ್ನು ಚಾಸಾ 8 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ಈ ಪ್ರಕರಣದ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗಾಗಲೇ ಮು.ಮಾ. 1 ರಿಂದ 99 ಎಂದು ಗುರುತಿಸಲಾಗಿದೆ.

ಆರೋಪಿಯು ಗೈರು ಹಾಜರಿದ್ದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ, ಅರೋಪಿಯನ್ನು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಹೇಳಿದ್ದು, ಅಕಾರಣ ಆರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ. ಸಾಕ್ಷಿಯು ಅರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಭಾವಿಸಲಾಯಿತು .

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಚಾಸಾ 1 ರವರಿಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಮುದ್ದೆಮಾಲುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿಮಾಡಿರುವುದಿಲ್ಲ, ಆರೋಪಿ ಯಾವುದೆ ಮದ್ಯ ಮಾರಾಟ ಮಾಡುತ್ತಿರಲಿಲ್ಲ, ಆತನಿಂದ ಯಾವುದೆ ಮು.ಮಾಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಾವು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸ 1 ರವರು ನಮ್ಮ ಮೇಲಾಧಿಯಾರಿಯಾದ ಕಾರಣ ಹಾಗೂ ಠಾಣಾ ಅಂಕಿಅಂಶದ ಸಲುವಾಗಿ ದಾಖಲಿಸಲಾದ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**